ಓ ಎಸ್ ನಂ. 119/2018
ಪಿ ಡಬ್ಲ್ಯು 1
ದಿನಾಂಕ 07-03-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 7 ರಿಂದ 13 ನೇ ಪ್ರತಿವಾದಿಗಳ ಪರಃ ಶ್ರೀ ಎನ್ ಎಸ್ ವಕೀಲರಿಂದಃ

ನನ್ನ ತಂದೆಯ ಹೆಸರು ನರಸಪ್ಪ. ಓಬಳಪ್ಪ ಎಂದರೆ ನನ್ನ ದೊಡ್ಡಪ್ಪ. ಪ್ರಸ್ತುತ ದಾವೆಯನ್ನು ಏನು ಪರಿಹಾರ ಕೋರಿ ಹೂಡಿರುತ್ತೇನೆ ಎಂದರೆ ಸಾಕ್ಷಿ ಬೇರೆಯವರಿಗೆ ಖಾತೆ ಮಾಡಬಾರದು ಎಂಬುದಾಗಿ ಎಂದು ನುಡಿಯುತ್ತಾರೆ. ದಾವಾ ಆಸ್ತಿಗೆ ನಾನೇ ಮಾಲೀಕ ಎಂದು ತೋರಿಸಲು ನನ್ನ ಬಳಿ ಏನು ದಾಖಲೆ ಇದೆ ಎಂದರೆ ಸಾಕ್ಷಿ ಮೂಲ ದಾಖಲೆಗಳು ಇವೆ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ನಿಪಿ-1 ರಿಂದ 10 ರ ದಾಖಲೆಗಳ ಪೈಕಿ ನನ್ನ ಮಾಲೀಕತ್ವ ರುಜುವಾತು ಪಡಿಸುವ ದಾಖಲೆ ಯಾವುದು ಎಂದು ಕೇಳಲಾಗಿ ಸಾಕ್ಷಿ ದಾಖಲೆಗಳನ್ನು ಪರಿಶೀಲಿಸಿ ನಿಪಿ-9 ರ ದಿನಾಂಕ 09/06/1947 ರ ಕ್ರಯಪತ್ರ ಇದೆ ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರ ನನ್ನ ಹೆಸರಿನಲ್ಲಿದೆಯಾ ಎಂದರೆ ಸಾಕ್ಷಿ ಅದು ನನ್ನ ಅಜ್ಜನಾದ ರಂಗಪ್ಪರವರ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ. ಸದರಿ ರಂಗಪ್ಪರವರು 7 ನೇ ಪ್ರತಿವಾದಿ ಹನುಮಂತಪ್ಪರವರಿಗೆ ಏನಾಗಬೇಕು ಎಂದರೆ ಸಾಕ್ಷಿ ರಂಗಪ್ಪರವರ

ತಮ್ಮನಾದ ಓಬಳಪ್ಪರವರ ಮಗ ಎಂದು ನುಡಿಯುತ್ತಾರೆ. ನಿಪಿ-10 ರ ಆರ್ ಟಿ ಸಿ ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿ 7 ನೇ ಪ್ರತಿವಾದಿಯ ಹಸೆರಿನಲ್ಲಿದೆ ಎಂದು ನುಡಿಯುತ್ತಾರೆ. ಅದು 1992-93 ಸಾಲಿನ ದಾಖಲೆ ಎಂದು ನುಡಿಯುತ್ತಾರೆ. 1992-93 ರಲ್ಲಿ ಪೌತಿ ಮೇರೆಗೆ 7 ನೇ ಪ್ರತಿವಾದಿ ಹೆಸರಿಗೆ ಖಾತೆ ಆಗಿದೆ ಎಂದರೆ ಸರಿ. 7 ನೇ ಪ್ರತಿವಾದಿ ನನ್ನ ತಂದೆ ನರಸಪ್ಪರವರ ಚಿಕ್ಕಪ್ಪನಾದ ಓಬಳಪ್ಪನವರ ಮಗನಾಗಿರುತ್ತಾರೆ. ರಂಗಪ್ಪನರವರ ಮಗ ಓಬಳಪ್ಪ ನನಗೆ ದೊಡ್ಡಪ್ಪನಾಗಬೇಕು. 1992-93 ರಲ್ಲಿ ಖಾತೆಯಾದ ಬಗ್ಗೆ ನಾನು ಯಾವಾಗ ತಿಳಿದುಕೊಂಡೆ ಎಂದರೆ ಸಾಕ್ಷಿ ಈಗ್ಗೆ ಸುಮಾರು 14-15 ವರ್ಷಗಳ ಹಿಂದೆ ಎಂದು ನುಡಿಯುತ್ತಾರೆ. ಆ ರೀತಿ 7 ನೇ ಪ್ರತಿವಾದಿ ಹೆಸರಿಗೆ ಖಾತೆ ಆಗಿರುವ ವಿಚಾರ ನನಗೆ ಗೊತ್ತಾದ ನಂತರ ದಾವೆ ಹೂಡಿರುತ್ತೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನಾನು ಎ ಸಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದೆ ಎಂದು ನುಡಿಯುತ್ತಾರೆ. ಓಬಳಪ್ಪ ಬಿನ್ ಲೇಟ್ ರಂಗಪ್ಪ ಎಂದರೆ ನನ್ನ ದೊಡ್ಡಪ್ಪ. ಚಂದ್ರಪ್ಪ ಬಿನ್ ಲೇಟ್ ನರಸಪ್ಪ ಎಂದರೆ ನಾನೇ ಆಗಿರುತ್ತೇನೆ.

2. ಸಾಕ್ಷಿಗೆ ಓ ಎಸ್ ನಂ.111/2006 ರ ದಾವೆಯ ವಾದಪತ್ರದ ದೃಡೀಕೃತ ನಕಲನ್ನು ತೋರಿಸಿ ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಕೇಳಲಾಗಿ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ಸದರಿ

ವಾದಪತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ದಾವೆಯನ್ನು ಯಾವ ಉದ್ದೇಶಕ್ಕಾಗಿ ಹೂಡಿದ್ದೆ ಎಂದರೆ ಸಾಕ್ಷಿ ಆ ಕೇಸನ್ನು ನಾನು ಹಾಕಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯನ್ನು ಯಾರು ಹೂಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನನ್ನ ಸಹಿಯನ್ನು ಫೋರ್ಜರಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರಸ್ತುತ ದಾವೆಯಲ್ಲಿ 7 ನೇ ಪ್ರತಿವಾದಿ ಸಲ್ಲಿಸಿರುವ ತಕರಾರಿನ ವಿಚಾರವನ್ನು ನಾನು ತಿಳಿದುಕೊಂಡಿರುತ್ತೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಅವರು ಏನು ತಕರಾರು ಸಲ್ಲಿಸಿದ್ದಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಪ್ರಸ್ತುತ ದಾವೆಯನ್ನು ದೊಡ್ಡಘಟ್ಟ ಗ್ರಾಮದ ಸರ್ವೆ ನಂ.67/1 ರ ಮೂರು ಎಕರೆ ಹದಿನೇಳೂವರೆಗೆ ಸಂಬಂದಪಟ್ಟಂತೆ ಹೂಡಿರುತ್ತೇನೆ. ದಾವಾ ಆಸ್ತಿ ನನ್ನ ಪ್ರಕಾರ ಹೇಗೆ ಬಂತು ಎಂದರೆ ಸಾಕ್ಷಿ ಅದು ನನ್ನ ಮುತ್ತಜ್ಜನಾದ ರಂಗಪ್ಪರವರ ಸ್ವತ್ತು ಎಂದು ನುಡಿಯುತ್ತಾರೆ. ಸದರಿ ರಂಗಪ್ಪನವರಿಂದ ಸದರಿ ಆಸ್ತಿ ಯಾರಿಗೆ ಬಂತು ಎಂದರೆ ಸಾಕ್ಷಿ 7 ನೇ ಪ್ರತಿವಾದಿ ಹೆಸರಿಗೆ ಬಂತು ಎಂದು ನುಡಿಯುತ್ತಾರೆ. ನನ್ನ ವಾದಪತ್ರದಲ್ಲಿ ಮೇಲ್ಕಂಡ ವಿಚಾರವನ್ನು ಹೇಳಿರುತ್ತೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಓ ಎಸ್ ನಂ.111/2006 ನನ್ನ ದೊಡ್ಡಪ್ಪ ಓಬಳಪ್ಪ ಬಿನ್ ರಂಗಪ್ಪ ಮತ್ತು ನಾನು ಸೇರಿ ಇದೇ

ನ್ಯಾಯಾಲಯದಲ್ಲಿ 7ನೇ ಪ್ರತಿವಾದಿ ವಿರುದ್ಧ ವಿಭಾಗ ಕೋರಿ ಸಲ್ಲಿಸಿದ್ದೇವು ಎಂದರೆ ಸಾಕ್ಷಿ ಆ ದಾವೆಯನ್ನು ನಾನು ಹೂಡಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯ ಆಸ್ತಿಗಳು ಈಗಾಗಲೇ ಸುಮಾರು 40 ವರ್ಷಗಳ ಹಿಂದೆ ವಿಭಾಗವಾಗಿರುವುದರಿಂದ ಭಾಗ ಕೊಡಲು ಬರುವುದಿಲ್ಲವೆಂದು ನ್ಯಾಯಾಲಯ ದಿನಾಂಕ 15/11/2007 ರಂದು ತೀರ್ಪು ನೀಡಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

3. ಓ ಎಸ್ ನಂ.212/2017 ರ ದಾವೆಯನ್ನು ನನ್ನ ತಾಯಿ ಪುಟ್ಟಮ್ಮ ಎನ್ನುವವರು ಈ ದಾವೆಯ 7ನೇ ಪ್ರತಿವಾದಿ ವಿರುದ್ಧ ಕಡೂರಿನ ಮೂರನೇ ಹೆಚ್ಚುವರಿ ನ್ಯಾಯಾಲಯದಲ್ಲಿ ದಾವಾ ಆಸ್ತಿ ಸೇರಿದಂತೆ ಇತರ ಆಸ್ತಿಗಳ ವಿರುದ್ಧ ವಿಭಾಗ ಕೋರಿ ಹೂಡಿರುತ್ತಾರೆ ಎಂದರೆ ಸಾಕ್ಷಿ ಆ ದಾವೆಯಲ್ಲಿ ಈ ಆಸ್ತಿ ಸೇರಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ಇತರೇ ಆಸ್ತಿಗಳೊಂದಿಗೆ ದಾವಾ ಆಸ್ತಿಯನ್ನು ಸಹ ಸೇರಿಸಲಾಗಿದೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನಾನು ನನ್ನ ತಾಯಿ ಪರವಾಗಿ ಜಿ ಪಿ ಎ ಪಡೆದು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾವೆಯನ್ನು ಯಾರು ಮುನ್ನಡೆಸಿರುತ್ತಾರೆ ಎಂದರೆ ಸಾಕ್ಷಿ ನಾನು ಮತ್ತು ನನ್ನ ತಾಯಿ ನಡೆಸಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ನನ್ನ ತಾಯಿ ನನಗೆ ಜಿ ಪಿ ಎ ಕೊಟ್ಟಿದ್ದರಾ ಎಂದರೆ ಸಾಕ್ಷಿ ಹೌದು ಈಗ್ಗೆ 2-3 ತಿಂಗಳ ಹಿಂದೆ ನೀಡಿರುತ್ತಾರೆ, ಅದನ್ನು ನ್ಯಾಯಾಲಯಕ್ಕೆ

ಸಲ್ಲಿಸಿರುತ್ತೇನೆ. ಸದರಿ ದಾವೆ ಏನಾಯಿತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ದಾವೆಯ ಬಗ್ಗೆ ನನ್ನ ವಕೀಲರನ್ನು ಕೇಳಿಲ್ಲವಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಸದರಿ ದಾವೆ ನಮಗೆ ಪಾಲು ಕೊಡಲು ಬರುವುದಿಲ್ಲ ಎಂಬುದಾಗಿ ದಿನಾಂಕ 21/02/2025 ರಂದು ವಜಾಗೊಂಡಿರುತ್ತದೆ ಎಂದರೆ ಸಾಕ್ಷಿ ನಮ್ಮ ವಕೀಲರನ್ನು ಆ ಬಗ್ಗೆ ಕೇಳಿಲ್ಲ ಎಂದು ನುಡಿಯುತ್ತಾರೆ. ಓ ಎಸ್ ನಂ.111/2006 ರ ದಾವೆಯ ತೀರ್ಪಿನ ವಿರುದ್ಧ ನಾನಾಗಲಿ ನನ್ನ ದೊಡ್ಡಪ್ಪ ಓಬಳಪ್ಪರವರಾಗಲಿ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸಾಕ್ಷಿ ಆ ದಾವೆಯನ್ನು ನಾನು ಹೂಡಿಲ್ಲ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.